ಶ್ರೀ ಕೆ. ಎನ್. ನಾಗೇಗೌಡ:- ನೀರನ್ನು ಹಂಚತಕ್ಕಂಥ ಕೆಲಸ ನಮ್ಮದು ಅಲ್ಲ. ಅದು ನೀರಾವರಿ ಸಲಹಾ ಸಮಿತಿಗೆ ಇರುತ್ತದೆ. ನಾನು ಮತ್ತೊಂದು ಸಲ ಅವರಿಗೆ ಸೂಚನೆಯನ್ನು ಕೊಡುತ್ತೇನೆ. ಕಾಡಾ ಚೇರಮನ್‌ಗೆ ಅಲ್ಲಿರುವ ವಾಸ್ತವಾಂಶವನ್ನು ತಿಳಿದುಕೊಂಡು ಬರಲು ತಿಳಿಸಿ, ಬೆಳೆಗಳಿಗೆ ಹಾಗು ಕುಡಿಯುವುದಕ್ಕೆ ನೀರನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದ್ಯತೆಯ ಮೇರೆಗೆ ಕುಡಿಯುವುದಕ್ಕೆ ನೀರು ಕೊಡಬೇಕೆಂದು ಸರ್ಕಾರದಿಂದ ನೀರಾವರಿ ಸಲಹಾ ಸಮಿತಿಗೆ ಆದೇಶವನ್ನು ಕೊಡಿಸುತ್ತೇನೆಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಬಿ. ನಂಜಾಮರಿ (ತಿಪಟೂರು) :- ಉಪಾಧ್ಯಕ್ಷರೇ, ಈಚನೂರು ಟ್ಯಾಂಕ್‌ನಲ್ಲಿ ಎಲ್ಲಾ ನೀರು ಖಾಲಿಯಾಗಿದೆ. ಇನ್ನು 15-20 ದಿವಸದವರೆಗೆ ಮಾತ್ರ ಸಾಕಾಗುತ್ತದೆ. ಇವರು ನೀರು ಕೊಡುವುದಿಲ್ಲವೆಂದು ಹೇಳುತ್ತಾರೆ, ಕಾರಣವೇನೆಂದರೆ ತಿಪಟೂರಿನಲ್ಲಿ ಈಗ ವಾರಕ್ಕೆ ಒಂದು ಸಲ ನೀರನ್ನು ಕುಡಿಯುವುದಕ್ಕೆ ಬಿಡುತ್ತಿದ್ದಾರೆ. ತೀವ್ರದಲ್ಲಿ ಹೇಮಾವತಿ ನಾಲೆಯಿಂದ ಬಿಟ್ಟರೆ ಈಚನೂರು ಕೆರೆಗೆ ನೀರನ್ನು ಬಿಟ್ಟರೆ ತಿಪಟೂರು ಮತ್ತು ಅರಸೀಕೆರೆಗೆ ನೀರನ್ನು ಬಿಡಬಹುದು. ಇಲ್ಲದಿದ್ದರೆ ನೀರನ್ನು ಕೊಡುವುದಕ್ಕೆ ಆಗುವುದಿಲ್ಲ. ಅಲ್ಲಿರುವ ಜನರು ರಾಜಕಾರಣಿಗಳ ಮೇಲೆ ಸಿಟ್ಟಾಗಿದ್ದಾರೆ, ಅವರು ಸ್ಟೈಕ್ ಮಾಡುವ ಹಂತಕ್ಕೆ ಬಂದಿದ್ದಾರೆ. ತೀವ್ರದಲ್ಲಿ ಹೇಮಾವತಿಯ ನೀರನ್ನು ಈಚನೂರು ಕೆರೆಗೆ ಬಿಟ್ಟರೆ ಮಾತ್ರ ಸಮಸ್ಯೆ ಬಗೆಹರಿಯುತ್ತದೆ. ತಿಪಟೂರಿಗೆ ವಾರಕ್ಕೆ ಒಂದು ಸಲ ನೀರನು ಕೊಡುತ್ತಿದ್ದಾರೆ, ಅದನ್ನು ಬದಲಾಯಿಸಿ ವಾರದಲ್ಲಿ 3 ದಿನ ನೀರು ಕೊಡುವ ವ್ಯವಸ್ಥೆ ಮಾಡಬೇಕು.

ಶ್ರೀ ಕೆ. ಎನ್. ನಾಗೇಗೌಡ:- ಕಾಡಾ ಚೇರ್‌ಮನ್‌ರನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ಶಾಸಕರನ್ನು ಕರೆಯಿಸಿ, ಬೆಂಗಳೂರಿನಲ್ಲಿ ಒಂದು ಸಭೆಯನ್ನು ಮಾಡಿ ನೀರಿನ ಪ್ರಮಾಣವನ್ನು ಪರಿಶೀಲಿಸಿ ನೀರನ್ನು ಕೊಡುವ ವ್ಯವಸ್ಥೆ ಮಾಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರುಗಳಿಗೆ ಭರವಸೆಯನ್ನು ಕೊಡುತ್ತೇನೆ.

6. <u>ವಿತ್ತೀಯ ಕಾರ್ಯಕಲಾಪಗಳು:</u>

1997-98 ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಮಂಡಳಿಗೆ ಅನುಮತಿ ಕೋರಿಕೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :- 1997-98ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕುರಿತು)ನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು :- ಮಂಡಿಸಲಾಯಿತು.

7. <u>ಅಧ್ಯಕ್ಷರ ಅಪ್ಪಣೆ ಮೇರೆಗೆ</u>

(ಅ) ಮಲ್ಯ ಆಸ್ಪತ್ರೆಯ ಮತ್ತು ಅದರ ಪಕ್ಕದಲ್ಲಿರುವ ಕಂಠೀರವ ಸ್ಟೇಡಿಯಂ ಜಾಗ ಕುರಿತು:

★ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಉಪಾಧ್ಯಕ್ಷರು ಮಾನ್ಯ ಉಪ ಮುಖ್ಯಮಂತ್ರಿಗಳ ಇದ್ದಾರೆ. ಅವರು ಉತ್ತರವನ್ನು ಕೊಡಬೇಕು. ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್ ಇವು ಶತಶತಮಾನಗಳ ಇತಿಹಾಸವುಳ್ಳ ಪಾರ್ಕ್‌ಗಳು. ಇದರಲ್ಲಿ ಕಬ್ಬನ್‌ಪಾರ್ಕ್ ಬಹಳ